# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 19 ಪ್ರಾ.ಸಾ. : 08**

| | | |
|---|---|---|
| ಸಾಕ್ಷಿಯ ಹೆಸರು | : | ಅಬ್ದುಲ್ ರವೂಫ್ ಅಬುತಾಲೀಬ್ ಶೇಖ್ |
| ತಂದೆಯ ಹೆಸರು | : | ಅಬುತಾಲೀಬ್ ಶೇಖ್ |
| ವಯಸ್ಸು | : | 16 ವರ್ಷ |
| ಕೆಲಸ | : | ವಿದ್ಯಾರ್ಥಿ |
| ವಾಸ | : | ಜನತಾ ಕಾಲೋನಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 18-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಅಬುತಾಲೀಬ್ ನನ್ನ ತಂದೆ, ಚಾಸಾ-1 ಜಬೀನಾಬಿ ನನ್ನ ತಾಯಿ, ನಮ್ಮ ತಂದೆ-ತಾಯಿಗೆ ನಾವು ಒಟ್ಟು ಮೂರು ಜನ ಮಕ್ಕಳು, ನಾವು ಚಂದಾವರದ ಜನತಾ ಕಾಲೋನಿಯಲ್ಲಿ ವಾಸವಾಗಿರುತ್ತೇವೆ. ಚಾಸಾ-10 ರಿಂದ 18 ರವರು ನನಗೆ ಗೊತ್ತು, ಅವರು ನಮ್ಮ ಊರಿನವರು. ಈಗ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ ಆರೋಪಿ ನನಗೆ ಗೊತ್ತು, ಅವರು ನಮ್ಮ ಹಿಂದಿನ ಓಣಿಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆ ಊರಿನ ಹಿರಿಯರಾಗಿದ್ದು, ಊರಿನ ಜನರೊಂದಿಗೆ ಚೆನ್ನಾಗಿದ್ದರು, ಆದ ಕಾರಣ ಊರಿನ ಜನರೆಲ್ಲರೂ ತಮ್ಮ ಸಮಸ್ಯೆಗಳನ್ನು ನನ್ನ ತಂದೆಯ ಬಳಿ ಬಂದು ಹೇಳುತ್ತಿದ್ದರು.

2. ದಿಃ03-05-2021 ರಂದು ನಾನು, ನಮ್ಮ ತಂದೆ-ತಾಯಿ ಹಾಗೂ ನನ್ನ ತಂಗಿ ಮತ್ತು ತಮ್ಮ ಎಲ್ಲರೂ ಮನೆಯಲ್ಲಿದ್ದೆವು. ಆ ದಿನ ಮದ್ಯಾಹ್ನ ಸುಮಾರು 12-45 ರ ಸಮಯದಲ್ಲಿ ಚಾಸಾ-10 ಅಜುರುದ್ದಿನ್ ಹಾಗೂ ಆತನ ಹೆಂಡತಿ ಚಾಸಾ- 15 ಅಂಜುಂ ರವರು ನಮ್ಮ ಮನೆಗೆ ಬಂದಿದ್ದು, ಚಾಸಾ-10 ರವರು ನನ್ನ ತಂದೆಯ ಬಳಿ "ನನ್ನ ಹೆಂಡತಿ ಈ ದಿನ ಬೆಳಿಗ್ಗೆ 11-00 ಗಂಟೆಗೆ ಆಕೆಯ ಚಿಕ್ಕಮ್ಮನಾದ ಚಾಸಾ-14 ರವರ ಮನೆಗೆ ಬಟ್ಟೆ ತೊಳೆಯಲು ಹೋದಾಗ, ಚಾಸಾ-14 ರವರ ಮನೆಯ ಪಕ್ಕದಲ್ಲಿ ವಾಸಿಯಾದ ಆರೋಪಿಯು ನನ್ನ ಹೆಂಡತಿಗೆ ಕೆಟ್ಟ ಪದಗಳನ್ನು ಬಳಸಿ, ಬೈದಿರುತ್ತಾನೆ ಹಾಗೂ ಅಸಭ್ಯವಾಗಿ ವರ್ತಿಸಿರುತ್ತಾನೆ ಮತ್ತು

ತನ್ನ ಲುಂಗಿಯನ್ನು ಎತ್ತಿ ತೋರಿಸಿರುತ್ತಾನೆ, ಆದ್ದರಿಂದ ನೀವು ಬಂದು, ಬುದ್ದಿ ಹೇಳಿ" ಎಂದು ಹೇಳಿರುತ್ತಾರೆ. ನಂತರ ನನ್ನ ತಂದೆ–ತಾಯಿ, ಚಾಸಾ–10 ಅಜರುದ್ದಿನ್ ಮತ್ತು 15 ಅಂಜುಂ ರವರು ಆರೋಪಿಯ ಮನೆಯ ಹತ್ತಿರ ಹೋದರು, ಅವರ ಜೊತೆ ನಾನು, ನನ್ನ ತಂಗಿ ಮತ್ತು ತಮ್ಮ ಸಹ ಹೋಗಿರುತ್ತೇವೆ.

3. ನಾವು ಆರೋಪಿಯ ಮನೆಯ ಹತ್ತಿರ ಹೋಗಲು ಹೋಗುತ್ತಿದ್ದಾಗ, ಚಾಸಾ–14 ಹೀನಾ ಕೌಸರ್ ರವರ ಮನೆಯ ಮುಂದಿನ ರಸ್ತೆಗೆ ಬಂದಾಗ, ಆರೋಪಿಯು ಮಸೀದಿಗೆ ಹೋಗಲು ನಮಗೆ ಎದುರು ಸಿಕ್ಕಿರುತ್ತಾನೆ. ಆಗ ನನ್ನ ತಂದೆ ಆರೋಪಿಗೆ "ಯಾಕೆ ನೀನು ನಿನ್ನ ಲುಂಗಿಯನ್ನು ಎತ್ತಿ ತೋರಿಸಿ ಚಾಸಾ–15 ಅಂಜುಂ ರವರೊಂದಿಗೆ ಅಸಭ್ಯವಾಗಿ ವರ್ತಿಸಿದ್ದೀಯಾ" ಎಂದು ಕೇಳಿದ್ದು, ಅದಕ್ಕೆ ಆರೋಪಿಯು ನನ್ನ ತಂದೆಗೆ "ರಾಂಡಕೆ ಬೇಟೆ, ಅದನ್ನು ಕೇಳಲು ನೀನು ಯಾರು" ಎಂದು ಬೈದಿರುತ್ತಾನೆ. ಅದಕ್ಕೆ ನನ್ನ ತಂದೆ ನೀನು ಈ ರೀತಿ ಮಾಡಿದರೆ ನಿನ್ನ ವಿರುದ್ಧ ಪೊಲೀಸರಿಗೆ ದೂರನ್ನು ನೀಡಿ, ನಿನ್ನನ್ನು ಜೈಲಿಗೆ ಕಳುಹಿಸುತ್ತೇನೆ ಎಂದು ಹೇಳಿದ್ದು, ಅದಕ್ಕೆ ಆರೋಪಿಯು ನನ್ನ ತಂದೆಗೆ ರಾಂಡಕೆ ಬೇಟೆ, ಸುಮ್ಮನೆ ಹೋಗು ನೀನು, ಇಲ್ಲವಾದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಹೇಳಿ, ತನ್ನ ಮನೆಯ ಒಳಗೆ ಹೋಗಿ, ಒಂದು ಚಾಕುವನ್ನು ತಂದಿರುತ್ತಾನೆ. ಜಗಳವಾಗುತ್ತಿದ್ದ ಕಾರಣ, ಆ ಸಮಯದಲ್ಲಿ ಅಲ್ಲಿಯೇ ಇದ್ದ ಚಾಸಾ–11 ಜಮಾಲಸಾಬ್, ಚಾಸಾ–12 ಅಬ್ದುಲ್ ಕರಿಂ ಸಾಬ್ ರವರು ಆರೋಪಿಗೆ ಸಮಾಧಾನ ಮಾಡುತ್ತಿದ್ದರು ಹಾಗೂ ನನ್ನ ತಂದೆ ಅಲ್ಲಿಯೇ ಬಿದ್ದಿದ್ದ ಅಡಿಕೆ ಮರದ ದಬ್ಬೆಯಿಂದ ಆರೋಪಿಯು ಚಾಕು ಹಿಡಿದುಕೊಂಡಿದ್ದ ಕೈಗೆ ಚಾಕು ಕೆಳಗೆ ಬೀಳಲೆಂದು ಹೊಡೆದಾಗ, ಆರೋಪಿಯು ನಿನ್ನನ್ನು ಸಾಯಿಸಿಯೇ ಬಿಡುತ್ತೇನೆ ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ನನ್ನ ತಂದೆಯ ಎದೆಗೆ ಚುಚ್ಚಿದ್ದು,ಆಗ ನನ್ನ ತಂದೆ ಕೆಳಗೆ ಬಿದ್ದಿರುತ್ತಾರೆ ಹಾಗೂ ಅವರ ಎದೆಯಿಂದ ರಕ್ತ ಬಂದಿರುತ್ತದೆ. ಆಗ ಸಮಯ ಮದ್ಯಾಹ್ನ 01–15 ಗಂಟೆ ಆಗಿತ್ತು. ನಂತರ ಆರೋಪಿಯು ತನ್ನ ಕೈಯಲ್ಲಿದ್ದ ಚಾಕುವನ್ನು ತೆಗೆದುಕೊಂಡು ಮನೆಗೆ ಹೋದನು. ಆ ಸಮಯದಲ್ಲಿ ಚಾಸಾ–10 ಅಜರುದ್ದಿನ್ ರವರು ಚಾಸಾ–14 ರವರ ಮನೆಯ ಕಂಪೌಂಡ್ ನಲ್ಲಿ ನಿಂತು ಜಗಳವಾಗುತ್ತಿದ್ದ ದೃಶ್ಯವನ್ನು ತನ್ನ ಮೊಬೈಲ್ ನಲ್ಲಿ ವಿಡಿಯೋ ಮಾಡುತ್ತಿದ್ದರು.

4. ನಂತರ ನಾನು, ನನ್ನ ತಾಯಿ ಚಾಸಾ–1, ಚಾಸಾ–13 ಹೀನಾ ಕೌಸರ್ ರವರು ಸೇರಿ ನನ್ನ ತಂದೆಯನ್ನು ಚಾಸಾ–16 ಇಮ್ತಿಯಾಜ್ ರವರ ಆಟೋದಲ್ಲಿ ಕುಮಟಾದ ಸರಕಾರಿ

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಸುಮಾರು 01-50 ರ ಸಮಯದಲ್ಲಿ ವೈದ್ಯರು ನನ್ನ ತಂದೆಯನ್ನು ಪರೀಕ್ಷಿಸಿ, ಮೃತಪಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ಆ ದಿನ ನನ್ನ ತಂದೆಯು ಪಿಂಕ್ ಬಣ್ಣದ ಅಂಗಿ, ಪಿಂಕ್ ಬಣ್ಣದ ಚೆಕ್ಸ ನಮೂನೆಯ ಲುಂಗಿ, ಪಿಂಕ್ ಬಣ್ಣದ ನಿಕ್ಕರ್ ನ್ನು ಧರಿಸಿದ್ದರು ಹಾಗೂ ಆರೋಪಿ ಚಾಕುವಿನಿಂದ ಚುಚ್ಚಿದ ನಂತರ ನನ್ನ ತಂದೆಯ ಬಟ್ಟೆಗಳಿಗೆ ರಕ್ತ ತಾಗಿತ್ತು. ಅದಲ್ಲದೇ ಅವರು ಕನ್ನಡಕವನ್ನು ಮತ್ತು ಪ್ಯಾರಾಗಾನ್ ಚಪ್ಪಲಿಯನ್ನು ಧರಿಸಿದ್ದರು. ಅದೇ ರೀತಿ ಆರೋಪಿಯು ಆ ದಿನ ನೀಲಿ ಬಣ್ಣದ ಅಂಗಿ, ಕಪ್ಪು ಮತ್ತು ಬಿಳಿ ಬಣ್ಣದ ಚೆಕ್ಸ್ ನಮೂನೆಯ ಲುಂಗಿಯನ್ನು ಧರಿಸಿದ್ದನು ಹಾಗೂ ಆತನ ಬಟ್ಟೆಗಳಿಗೂ ಸಹ ರಕ್ತ ತಾಗಿತ್ತು. ಆ ನಂತರ ನಾನು ಚಾಸಾ-10 ಅಜರುದ್ದಿನ್ ರವರ ಮೊಬೈಲ್ ನಲ್ಲಿ ಘಟನೆಯ ವಿಡಿಯೋವನ್ನು ನೋಡಿರುತ್ತೇನೆ. ಈ ಬಗ್ಗೆ ನಾನು ದಿಃ 04-05-2021 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿ, ಈತನೇ ನನ್ನ ತಂದೆಯನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ.

5. ಸಾಕ್ಷಿಯು ತನ್ನ ತಂದೆಯ ಕನ್ನಡಕವನ್ನು ಹಾಗೂ ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-5 ಮತ್ತು 6 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಸಾಕ್ಷಿಯು ಘಟನಾ ದಿನ ತನ್ನ ತಂದೆಯ ಕೈಯಲ್ಲಿದ್ದ ಅಡಿಕೆ ಮರದ ದಬ್ಬೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು-7 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ತನ್ನ ತಂದೆ ಘಟನಾ ದಿನ ಧರಿಸಿದ್ದ ಲುಂಗಿ, ಅಂಗಿ ಮತ್ತು ನಿಕ್ಕರ್ ನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-9 ರಿಂದ 10 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಘಟನಾ ದಿನ ಆರೋಪಿ ಧರಿಸಿದ್ದ ಅಂಗಿ ಮತ್ತು ಲುಂಗಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಸಾಕ್ಷಿಯು ಘಟನಾ ದಿನ ಆರೋಪಿಯು ಕೃತ್ಯಕ್ಕೆ ಬಳಸಿದ ಕತ್ತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಚಾಸಾ-10 ರವರ ಮೊಬೈಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-11 ಎಂದು ಗುರುತಿಸಲಾಗಿರುತ್ತದೆ. ಮುದ್ದೆ ಮಾಲು-11 ರಲ್ಲಿರುವ ವಿಡಿಯೋವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿಪಿ-11 ಮತ್ತು 12 ಪೋಟೋದಲ್ಲಿ ತನ್ನ ತಂದೆಯ ಮೃತ ದೇಹವನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

6. ನಾನು ಈಗ ಐ.ಟಿ.ಐ ಓದುತ್ತಿರುತ್ತೇನೆ. ನನಗೆ ಕನ್ನಡ ಓದಲು ಬರುವುದಿಲ್ಲ, ನಾನು ಉರ್ದು ಮೀಡಿಯಂ ನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ಓದಿರುವುದಿಲ್ಲ ಎಂದರೆ ಸರಿ. ಸಮನ್ಸ್ ನೀಡಿದ ನಂತರ ಪೊಲೀಸರು ಎಷ್ಟು ಬಾರಿ ಪೊಲೀಸರು ನಿಮ್ಮ ಮನೆಗೆ ಬಂದಿದ್ದರು ಎಂದು ಪ್ರಶ್ನೆ ಕೇಳಲಾಗಿ ಸಾಕ್ಷಿಯು ನಾನು ಕಾಲೇಜ್ ಗೆ ಹೋಗಿದ್ದು, ಪೊಲೀಸರು ನನ್ನ ತಾಯಿಗೆ ಸಮನ್ಸ್ ನೀಡಿ ಹೋಗಿರುತ್ತಾರೆ ಹಾಗೂ ಸಮನ್ಸ್ ನೀಡಿದ ನಂತರ ಪೊಲೀಸರು ನನ್ನನ್ನು ಭೇಟಿಯಾಗಿರುವುದಿಲ್ಲ. ಹೈಸ್ಕೂಲ್ ಓದುವಾಗ ನಿನ್ನ ಜೊತೆ ಅಕ್ಕ-ಪಕ್ಕದ ಎಷ್ಟು ಮಕ್ಕಳು ಬರುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಅಕ್ಕ-ಪಕ್ಕದವರು ಬರುತ್ತಿರಲಿಲ್ಲ ಆದರೆ ಮುಂದೆ ರಸ್ತೆಯಲ್ಲಿ ಬಹಳಷ್ಟು ಹುಡುಗರು ಬರುತ್ತಿದ್ದರು. ನಾನು ನಮ್ಮ ಕೇರಿಯ ಮಕ್ಕಳೊಂದಿಗೆ ಮೈದಾನದಲ್ಲಿ ಆಟವಾಡಲು ಹೋಗುತ್ತೇನೆ. ನಾನು ನನ್ನ ತಾಯಿಯ ಮಾತನ್ನು ಕೇಳುತ್ತೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಬರುವ ಮೊದಲು ನನ್ನ ತಾಯಿ ಇದೇ ರೀತಿ ಹೇಳಬೇಕೆಂದು ಹೇಳಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಪ್ರತ್ಯಕ್ಷವಾಗಿ ನೋಡಿದ್ದನ್ನೇ ನುಡಿಯುತ್ತಿದ್ದೇನೆ ಎಂದು ಹೇಳಿರುತ್ತಾರೆ.

7. ಈ ಪ್ರಕರಣದ ಘಟನೆ ನಡೆಯುವ ಕಾಲಕ್ಕೆ ಅಂದರೆ 2021 ನೇ ಇಸ್ವಿಯಲ್ಲಿ ನನಗೆ 12 ವರ್ಷಗಾಗಿದ್ದವು. ನನ್ನ ತಂದೆ ಊರಿನ ಮುಖ್ಯಸ್ಥರಲ್ಲ ಎಂದರೆ ಸರಿ. ಊರಿನ ಜನರು ಯಾವ ರೀತಿಯ ಸಮಸ್ಯೆಗಳನ್ನು ನಿನ್ನ ತಂದೆಯ ಬಳಿ ತರುತ್ತಿದ್ದರು ಎಂದರೆ ಸಾಕ್ಷಿಯು ಯಾವ ರೀತಿಯ ಸಮಸ್ಯೆಗಳು ಎಂದು ನನಗೆ ಹೇಳಲು ಬರುವುದಿಲ್ಲ, ಆ ಸಮಯದಲ್ಲಿ ನಾನು ಶಾಲೆಗೆ ಹೋಗುತ್ತಿದ್ದೆ. ಊರಿನ ಜನರು ಬರುತ್ತಿದ್ದರು ಎಂದರು ನನ್ನ ತಾಯಿ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ಅಕ್ಕ-ಪಕ್ಕದಲ್ಲಿ ಎಷ್ಟು ಮನೆಗಳು ಇವೆ ಎಂದರೆ ಸಾಕ್ಷಿಯು 6 ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಚಾಸಾ-10 ಅಜರುದ್ದಿನ್ ರವರ ಮನೆ ನಮ್ಮ ಮನೆಯಿಂದ ಸುಮಾರು 100 ರಿಂದ 150 ಅಡಿ ದೂರದಲ್ಲಿರುತ್ತದೆ. ಚಾಸಾ-10 ರವರ ಮನೆ ಹಾಗೂ ನಮ್ಮ ಮನೆಯ ನಡುವೆ ಸುಮಾರು 7-8 ಮನೆಗಳು ಇರುತ್ತವೆ. ಗಲಾಟೆ ನಡೆಯುವ ಸಮಯದಲ್ಲಿ ಸುಮಾರು 20-25 ಜನರು ಸೇರಿದ್ದರು. ಆರೋಪಿಯು ರಸ್ತೆಯಲ್ಲಿ ಸಿಕ್ಕಾಗ ಆತನ ಹತ್ತಿರ ಮಾತನಾಡಲು ನನ್ನ ತಂದೆ ಹಾಗೂ ಚಾಸಾ-10 ಅಜರುದ್ದಿನ್ ರವರು ಮುಂದೆ

ಹೋಗಿರುತ್ತಾರೆ ಹಾಗೂ ಅವರು ಮಾತನಾಡುತ್ತಿದ್ದರು. ನನ್ನ ತಂದೆ ನಿಂತ ಜಾಗದಿಂದ ನಾವು ಸುಮಾರು 15 ಅಡಿ ದೂರದಲ್ಲಿ ನಿಂತಿರುತ್ತೇವೆ. ಆರೋಪಿ ಹಾಗೂ ನನ್ನ ತಂದೆಯ ನಡುವೆ ಯಾವುದೇ ದ್ವೇಷ ಇರಲಿಲ್ಲ ಹಾಗೂ ಅವರು ಚೆನ್ನಾಗಿದ್ದರು ಎಂದರೆ ಸರಿ.

8. ಕೃತ್ಯ ನಡೆದ ಸ್ಥಳದಲ್ಲಿ ತೆಂಗಿನ ಮರಗಳು ಇರುತ್ತವೆ ಎಂದರೆ ಸಾಕ್ಷಿಯು ಒಂದು ಸಣ್ಣ ತೆಂಗಿನ ಮರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸ್ಥಳದಲ್ಲಿ ಅಡಿಕೆ ಮರ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯಿಂದ ಚಾಸಾ-14 ಹೀನಾ ಕೌಸರ್ ರವರ ಮನೆ ಸುಮಾರು 300 ಮೀಟರ್ ದೂರದಲ್ಲಿರುತ್ತದೆ. ನಾವು ಚಾಸಾ-14 ಹೀನಾ ಕೌಸರ್ ರವರ ಮನೆಗೆ ನೀರಿಗಾಗಿ ಹೋಗುತ್ತೇವೆ ಎಂದರೆ ಸರಿ. ಚಾಸಾ-14 ಮತ್ತು ಆರೋಪಿಯ ನಡುವೆ ಜಗಳವಾಗುತ್ತಿರುತ್ತದೆ ಎಂದರೆ ಸಾಕ್ಷಿಯು ನಾನು ಶಾಲೆಗೆ ಹೋಗುತ್ತಿದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-14 ರವರ ಮನೆಯ ಮುಂದಿನ ರಸ್ತೆ ಕಚ್ಚಾ ರಸ್ತೆ ಎಂದರೆ ಸರಿ. ಚಾಸಾ-14 ರವರ ಮನೆಯ ಒಂದು ತೆಂಗಿನ ಗಿಡ ಇರುವ ಕಾರಣ, ಅವರ ಮನೆಯ ಮುಂದಿನ ರಸ್ತೆಯಲ್ಲಿ ಓಡಾಡುವವರು ಕಾಣುವುದಿಲ್ಲ ಎಂದರೆ ಸರಿಯಲ್ಲ.

9. ಗಲಾಟೆ ಸಮಯದಲ್ಲಿ ನನ್ನ ತಂದೆ ಹಾಗೂ ಆರೋಪಿಯ ನಡುವೆ ಏನೇನು ಮಾತುಗಳಾಗುತ್ತಿತ್ತು ಎಂದು ಕೇಳಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ನಾನು ಸಣ್ಣವನಿದ್ದು, ನಾನು ಸರಿಯಾಗಿ ಕೇಳಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯೇ ಮೊದಲಿಗೆ ಆರೋಪಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಚಾಕು ಬೀಳಲು ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಸೇರಿದ್ದ ಜನರು ನನಗೆ ಗೊತ್ತಿರುತ್ತಾರೆ, ಆದರೆ ಅವರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯಕ್ಕೆ ಬರುವ ಮೊದಲು ಚಾಸಾ-11 ಜಮಾಲಸಾಬ್ ಮತ್ತು ಚಾಸಾ-12 ಕರೀಂ ಸಾಬ್ ರವರ ಹೆಸರನ್ನು ಹೇಳಬೇಕೆಂದ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-11 ಮತ್ತು 12 ರವರು ಸ್ಥಳದಲ್ಲಿ ಇಲ್ಲದಿದ್ದರೂ ಸಹ ನನ್ನ ತಾಯಿ ಅವರ ಹೆಸರನ್ನು ಹೇಳಿಕೊಟ್ಟ ಕಾರಣ, ಅವರು ಇದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯೇ ಮೊದಲಿಗೆ ಸಿಟ್ಟಿನಿಂದ ಆರೋಪಿಗೆ ಹೊಡೆದ ಕಾರಣ ಆರೋಪಿ ನನ್ನ ತಂದೆಯನ್ನು ತಳ್ಳಿದ್ದು, ಕೆಳಗೆ ಬಿದ್ದ ಕಾರಣ ನನ್ನ ತಂದೆಗೆ ಗಾಯವಾಗಿ ರಕ್ತ ಸ್ರಾವವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಚಾಕುವನ್ನು ತಂದಿಲ್ಲ ಎಂದರೆ ಸರಿಯಲ್ಲ.

10. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸಹ ನನ್ನ ತಾಯಿ ಹೇಳಿಕೊಟ್ಟಂತೆ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–10 ರವರು ಯಾವುದೇ ವಿಡಿಯೋ ಮಾಡಿರುವುದಿಲ್ಲ ಹಾಗೂ ನಾನು ಅದನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬಿದ್ದು ಗಾಯ ಮಾಡಿಕೊಂಡು ರಕ್ತ ಸ್ರಾವವಾಗಿ ಮೃತಪಟ್ಟಿದ್ದು, ಆರೋಪಿಯೇ ನನ್ನ ತಂದೆಯನ್ನು ಕೊಲೆ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–10 ಮತ್ತು 15 ರವರು ನಮ್ಮ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಚಾಕು ಬೀಳಲೆಂದೆ ಮೊದಲಗೆ ಆರೋಪಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–10 ನಿಕ್ಕರ್ ಪಿಂಕ್ ಬಣ್ಣದಲ್ಲ ಎಂದರೆ ಸಾಕ್ಷಿಯು ಪಿಂಕ್ ಬಣ್ಣದ ರೀತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಂತರ ಆರೋಪಿ ಪರ ವಕೀಲರು ಮುದ್ದೆ ಮಾಲು–10 ಮರೂನ್ ಬಣ್ಣದ್ದು ಎಂದು ಪ್ರಶ್ನೆ ಕೇಳಲಾಗಿ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮುದ್ದೆ ಮಾಲು–7 ಅಡಿಕೆ ಮರದ ದಬ್ಬೆ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೆ ಮಾಲುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–10 ರವರ ಮೊಬೈಲ್ ನಲ್ಲಿದ್ದ ವಿಡಿಯೋವನ್ನು ನೋಡಿದ ಬಗ್ಗೆ ಪೊಲೀಸರ ಮುಂದೆ ಹೇಳಿರುವುದಿಲ್ಲ. ಚಾಸಾ–10 ಅಜರುದ್ದಿನ್ ರವರು ಯಾವುದೇ ವಿಡಿಯೋ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ